**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**O.S. ----                                                          PW 1-**
**32/2021**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ  ಪ್ರತಿವಾದಿ ಪರ ಶ್ರೀ /ಪಿ ಎಂ ಸಿ  ವಕೀಲರಿಂದಃ**

ಪ್ರತಿವಾದಿ ನಂಬರ 7 ರಿಂದ 9 ಮತ್ತು ಪ್ರತಿವಾದಿ ನಂಬರ 11 ರಿಂದ 18 ಪ್ಲಾಟ ಖರೀದಿ ಮಾಡಿರುತ್ತಾರೆ. ಅವರು ಯಾವಾಗ ಪ್ಲಾಟ ಖರೀದಿ ಮಾಡಿದ್ದಾರೆಂದು ಗೊತ್ತಿಲ್ಲ. ಅವರು ಪ್ಲಾಟ ಖರೀದಿ ಮಾಡುವಾಗ ಪ್ರತಿವಾದಿ ನಂಬರ 1 ರಾಮನಗೌಡ ತಂದೆ ಕೃಷ್ಣಗೌಡ ಪಾಟೀಲ ಇವರ ಹೆಸರು ಮಾತ್ರ  ಇತ್ತು ಎಂದರೆ ನನಗೆ ಗೊತ್ತಿಲ್ಲ. 1991 ರಿಂದ ದಾವಾ ಆಸ್ತಿ ಮಾಲೀಕ 1 ನೇ ಪ್ರತಿವಾದಿ ಎಂದರೆ ಗೊತ್ತಿಲ್ಲ.  ಅದೇ ರೀತಿ 1991 ರಿಂದ 1 ನೇ ಪ್ರತಿವಾದಿ ಹೆಸರಿನಲ್ಲಿ ಆಸ್ತಿಗಳು ಇವೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂಬರ 7 ರಿಂದ 9, ಪ್ರತಿವಾದಿ  11 ರಿಂದ ಪ್ರತಿವಾದಿ 18 ರವರು 1 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ದಾಖಲೆಗಳು ನೋಡಿ ಯೋಗ್ಯ ಬೆಲೆಗೆ ಖರೀದಿ ಮಾಡಿದ್ದಾರೆ  ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂಬರ 7 ರಿಂದ 9 ಮತ್ತು ಪ್ರತಿವಾದಿ ನಂಬರ 11 ರಿಂದ ಪ್ರತಿವಾದಿ ನಂಬರ 18 ರವರು ಪ್ಲಾಟ ಖರೀದಿ ಮಾಡಿದ್ದರಿಂದ ಪಕ್ಷಗಾರನ್ನಾಗಿ ಮಾಡಿದ್ದೇನೆ. ಸದರಿ ಮಾರಾಟ ಮಾಡುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರು ನಾನು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೌಖಿಕ ಒಪ್ಪಿಗೆ ಮೇರೆಗೆ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವಾಗಲೂ  ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿದ್ದೇವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾರಾಟ ಮಾಡಿದ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ರಾಮನಗೌಡ ಪಾಟೀಲ 2015 ರಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದು ಗೊತ್ತಿಲ್ಲ. 2010 ರಲ್ಲಿಯೂ ಸಹ ಮಾರಾಟ ಮಾಡಿದ್ದು ಗೊತ್ತಿಲ್ಲ. ಖರೀದಿ ಆಗುವಾಗ ವಿಷಯ ಗೊತ್ತಿದ್ದು ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ನಂಬರ  4 ರಿಂದ 6 ನೇ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಾಕಶ ಕೋರಿದ್ದು, ಕೋರಿಕೆಯ ಮೇರೆಗೆ ಕಾಲಾವಕಾಶ ನೀಡಲಾಯಿತು ಹಾಗೂ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.